


ವಿಠಲಗಟ್ಟಿ ಉಳಿಯ

ಕಲೆ: ಗಣೇಶ್ ಆಚಾರ್ಯ

# ವಿಚಿತ್ರ ಸ್ವಯಂವರ!

ಒಂದಾನೊಂದು ಕಾಲದಲ್ಲಿ ಮೆಕ್ಸಿಕೋ ಚಕ್ರವರ್ತಿ ಎರಡನೇ ಮ್ಯಾಕ್ಸ್ ಮಿಲಿಯನ್‌ನ ಮುದ್ದಿನ ಮಗಳಾದ ಅಪ್ರತಿಮ ಸುಂದರಿ ಕುಮಾರಿ ಹೆಲೆನ್ ಮದುವೆ ವಯಸ್ಸಿಗೆ ಕಾಲಿಟ್ಟಳು. ಅವಳ ಮದುವೆ ಮಾಡಬೇಕಾದ ಅನಿವಾರ್ಯತೆ ಚಕ್ರವರ್ತಿಗೆ ಬಂದೊದಗಿತು. ಆದರೆ ಚೆಲುವೆ ಕುಮಾರಿ ಹೆಲೆನ್‌ಳನ್ನು ಮದುವೆಯಾಗಲು ಎಷ್ಟೋ ವರರು ಮುಂದಾದರೂ ಚಕ್ರವರ್ತಿ ಮ್ಯಾಕ್ಸ್ ಮಿಲಿಯನ್ ಅಷ್ಟು ಸುಲಭದಲ್ಲಿ ವಿವಾಹ ನೆರವೇರಿಸಲು ಸಿದ್ಧನಿರಲಿಲ್ಲ.